## ಆಕ್ಷೇಪಣೆ ಬಿಟ್ಟು, ಬೆನ್ನು ತಟ್ಟೋಣ

ಕಾಲ ಬದಲಾಗಿದೆ. ಜನರ ಚಿಂತನೆಗಳು ಬದಲಾಗುತ್ತಿವೆ. ಹಿಂದೆ ಹೆಣ್ಣುಮಕ್ಕಳು ಹೊಸಿಲು ದಾಟಿ ಹೊರಬರುವುದೇ ಕಷ್ಟವಾಗಿತ್ತು. ಈಗ ಅವರು ಎಲ್ಲಾ ರಂಗಗಳಲ್ಲೂ ಪುರುಷನಿಗೆ ಸರಿಸಮನಾಗಿ ಸ್ಪರ್ಧಿಸುತ್ತಿದ್ದಾರೆ. ಬಾಹ್ಯಾಕಾಶಕ್ಕೂ ಲಗ್ಗೆ ಹಾಕಿದ್ದಾರೆ. ಗಂಡುಮಕ್ಕಳಿಗೆ ಇರುವಷ್ಟೇ ಹಕ್ಕುಗಳನ್ನು ಬಯಸುವ ಹೆಣ್ಣುಮಕ್ಕಳು ಕರ್ತವ್ಯಗಳನ್ನೂ ನಿರ್ವಹಣೆ ಮಾಡಬೇಕು. ವೃದ್ಧಾಪ್ಯದಲ್ಲಿ ತಂದೆತಾಯಿಯರ ಜವಾಬ್ದಾರಿ ಹೊರಬೇಕು. ಈ ಕಾಲದಲ್ಲಿ ಹೆಣ್ಣುಮಕ್ಕಳು ಪೌರೋಹಿತ್ಯ ಮಾಡುತ್ತಿದ್ದಾರೆ. ಹಾಗಿದ್ದ ಮೇಲೆ ಅಂತ್ಯಸಂಸ್ಕಾರ ಮಾಡಿದರೆ ತಪ್ಪೇನು? ಹಲವಾರು ಕುಟುಂಬಗಳಲ್ಲಿ ಹೆಣ್ಣುಮಕ್ಕಳು ಈ ಕೆಲಸ ಮಾಡುತ್ತಿದ್ದಾರೆ. ಅವರ ಕೆಲಸಕ್ಕೆ ಆಕ್ಷೇಪಣೆ ಮಾಡುವುದನ್ನು ಬಿಟ್ಟು ಬೆನ್ನು ತಟ್ಟೋಣ.

—ಮುಕ್ತಾ ಸಿ.ಎನ್.

## ಪ್ರೀತಿಗಿಂತ ಬೇರೆ ಅರ್ಹತೆ ಬೇಕೆ?

ಜೀವ ಇರುವಾಗ ಗಂಡು–ಹೆಣ್ಣು ಎಂಬ ಭೇದ. ಆತ್ಮಕ್ಕೆ ಲಿಂಗಭೇದ ಇಲ್ಲ. ನಾವು ಅಂತ್ಯಸಂಸ್ಕಾರ ಮಾಡುವುದು ಆತ್ಮಕ್ಕೆ. ಅಂತ್ಯಸಂಸ್ಕಾರ ಮಾಡುವುದು ನಮ್ಮ ತಂದೆ ತಾಯಿಯ ಋಣ ತೀರಿಸಲು. ಋಣ ಎಂದಾಗ ಅದು ಮಗನೇ ಇರಲಿ ಮಗಳೇ ಇರಲಿ ಹೆತ್ತವರ ಋಣ ಇದ್ದೇ ಇರುತ್ತದೆ ಅಲ್ಲವೇ? ಹಾಗಿದ್ದ ಮೇಲೆ ಇಬ್ಬರಿಗೂ ಹಕ್ಕು ಖಂಡಿತವಾಗಿಯೂ ಇರುತ್ತದೆ.

ಗಂಡು ಹೆಣ್ಣಿನ ನಡುವೆ ತಾರತಮ್ಯವಿಲ್ಲ ಎಂದು ವೇದವನ್ನು ಓದಿದಾಗ ತಿಳಿಯುತ್ತದೆ. ಎಲ್ಲರಿಗೂ ಸಮಾನ ಹಕ್ಕಿದೆ ಎಂದು ಅದು ಹೇಳುತ್ತದೆ. ಅಂತ್ಯಸಂಸ್ಕಾರವನ್ನು ಮಗನೇ ಮಾಡಬೇಕು ಅಥವಾ ಮಗಳೇ ಮಾಡಬೇಕೆಂದು ಎಲ್ಲಿಯೂ ಹೇಳಿಲ್ಲ. ಕ್ರಿಯಾಕರ್ಮ ಮಾತ್ರವಲ್ಲದೆ ಪೂಜೆ ಹೋಮ ಕೂಡ ಮಹಿಳೆಯರು ಮಾಡಬಹುದು ಎಂದು ವೇದ ಹೇಳುತ್ತದೆ. ವೇದಗಳಲ್ಲಿ ಲಿಂಗಭೇದ ಮಾಡಲಿಲ್ಲ. ಮುಂದೆ ಹೇಗೆ ಈ ಸಮಾಜ ಪುರುಷ ಪ್ರಧಾನವಾಯಿತೋ ಗೊತ್ತಿಲ್ಲ. ನನ್ನ ಪ್ರಕಾರ ಯಾರು ನಮ್ಮ ಹೆತ್ತವರನ್ನು ಕೊನೆಯವರೆಗೂ ಪ್ರೀತಿಯಿಂದ ಗೌರವದಿಂದ ನೋಡಿಕೊಳ್ಳುತ್ತಾರೋ ಅವರು ಅಂತ್ಯಸಂಸ್ಕಾರ ಮಾಡಲು ಅರ್ಹರು.

—ಹರ್ಷಾ ಕಾಮತ್, ಕಾರ್ಕಳ



## ದಿಟ್ಟೆಯರ ಮುನ್ನುಡಿ

ಸುಮಾರು ಐದು ವರ್ಷಗಳ ಹಿಂದೆ ಎರಡು ಅಪರೂಪದ ಘಟನೆಗಳು ನನ್ನ ಕಣ್ಣ ಮುಂದೆಯೇ ನಡೆದಿದ್ದವು.

ತಂದೆ, ತಾಯಿ ಮತ್ತು ಮಗಳಿದ್ದ ಚಿಕ್ಕ ಕುಟುಂಬ. ಅನಾರೋಗ್ಯದಿಂದ ತಾಯಿ ಮರಣಿಸಿದರು. ಅವರ ಅಂತ್ಯಕ್ರಿಯೆಯನ್ನು ಮಾಡುವ ಮೂಲಕ ತಾಯಿಯ ಋಣ ತೀರಿಸಲು ಮುಂದಾದಳು ಮಗಳು. ಸಾಮಾಜಿಕ ಕಾರ್ಯಕರ್ತರಾಗಿದ್ದ ತಂದೆಯಿಂದಲೂ ಇದಕ್ಕೆ ಒಪ್ಪಿಗೆ ದೊರಕಿತು. ತಾಯಿಯ ಚಿತೆಗೆ ಮಗಳು ಅಗ್ನಿಸ್ಪರ್ಶ ಮಾಡಿದ್ದು ಸುದ್ದಿಯೂ ಆಯಿತು. ಇನ್ನೊಂದು ಪ್ರಸಂಗ. ಅದು ಗಂಡು ಸಂತಾನವಿಲ್ಲದ ಕುಟುಂಬ. ತಂದೆ ತೀರಿಕೊಂಡರು. ಅವರ ಪುತ್ರಿಯೇ ತಂದೆಯ ಅಂತ್ಯಸಂಸ್ಕಾರ ಮಾಡಲು ನಿರ್ಧರಿಸಿದಳು. ತಾಯಿಯೂ ಇದನ್ನು ಬೆಂಬಲಿಸಿದರು. ಈ ನಿಟ್ಟಿನಲ್ಲಿ ಕ್ರಮಿಸಬೇಕಾದ ಹಾದಿ ಬಹಳವಿದೆ. ಈ ದಿಟ್ಟೆಯರು ಮುನ್ನುಡಿ ಇಟ್ಟಿರುವುದಂತೂ ಸತ್ಯ.

—ಮಂಜುನಾಥ್ ಡಿ.ಎಸ್.

## ತೊಟ್ಟಿಲು ತೂಗುವ ಕೈ ಅಂತ್ಯಸಂಸ್ಕಾರ ಮಾಡದೇ?

ಹೆಣ್ಣು ಎಂಬ ಕಾರಣಕ್ಕಾಗಿ ಯಾವುದೇ ವಿಷಯದಲ್ಲಿ ತಾರತಮ್ಯ ಮಾಡಬಾರದು ಎಂಬ ಕಾನೂನೇ ಇದೆ. ಹೀಗಿರುವಾಗ ಹೆತ್ತವರ ಅಂತ್ಯಸಂಸ್ಕಾರವನ್ನು ಹೆಣ್ಣುಮಕ್ಕಳು ಮಾಡಿದರೆ ತಪ್ಪೇನು? ಆಸ್ತಿಯಲ್ಲಿ ಮಹಿಳೆಯರಿಗೆ ಪುರುಷರಷ್ಟೇ ಸಮಪಾಲು ಪಡೆದುಕೊಳ್ಳುವ ಅವಕಾಶವನ್ನು ಸಂವಿಧಾನ ನೀಡಿದೆ. ಆಸ್ತಿ ಹಕ್ಕು ಪಡೆದುಕೊಂಡ ಹೆಣ್ಣುಮಕ್ಕಳು ತಂದೆ ತಾಯಿಯ ಅಂತ್ಯಸಂಸ್ಕಾರವನ್ನು ಮಾಡಬಾರದು ಎಂದರೆ ಇದ್ಯಾವ ನ್ಯಾಯ? ಗಂಡುಮಕ್ಕಳೇ ಇರಲಿ, ಹೆಣ್ಣುಮಕ್ಕಳೇ ಇರಲಿ, ಯಾರು ತಂದೆ ತಾಯಿಯನ್ನು ಅವರ ಜೀವಿತಾವಧಿಯವರೆಗೆ ಜೋಪಾನ ಮಾಡುತ್ತಾರೋ ಅವರಿಗೇ ಅಂತ್ಯಸಂಸ್ಕಾರ ಮಾಡುವ ಅವಕಾಶ ದೊರೆಯಬೇಕಿದೆ. ತೊಟ್ಟಿಲು ತೂಗುವ ಕೈ ಜಗತ್ತನೇ ತೂಗಬಲ್ಲದು ಎಂಬಂತೆ, ತೂಗುವ ಕೈಗೆ ಹೆತ್ತ ತಂದೆ ತಾಯಿಯ ಅಂತ್ಯಸಂಸ್ಕಾರ ಮಾಡುವುದು ಕಠಿಣ ಕೆಲಸವೇನಲ್ಲ. ಗೊಡ್ಡು ಸಂಪ್ರದಾಯಗಳನ್ನು ಕಿತ್ತೊಗೆದು ಮಗಳೂ ತಂದೆ ತಾಯಿಯ ಅಂತ್ಯಸಂಸ್ಕಾರ ಮಾಡುವುದರಲ್ಲಿ ತಪ್ಪೇನಿಲ್ಲ.

—ಚಂದ್ರಶೇಖರ ಎಸ್. ಚಿನಕೇಕರ, ಚಿಕ್ಕೋಡಿ

## ಹೆಗಲಾಗಿ ನಿಂತವರಿಗೆ ಅವಕಾಶ ಸಿಗಲೇಬೇಕಲ್ಲವೇ?

ಹೆಣ್ಣುಮಕ್ಕಳು ಎಂದರೆ ಹುಣ್ಣಿನಂತೆ ಕಾಣುವ ಈ ಸಮಾಜದಲ್ಲಿ ಹೆತ್ತವರ ಕ್ರಿಯಾಕರ್ಮ ಮಾಡುವ ಅವಕಾಶ ನೀಡುವ ಅಗತ್ಯ ಬಹಳ ಇದೆ.

ಗಂಡುಮಕ್ಕಳ ಸರಿ ಸಮಾನವಾಗಿ ಅಥವಾ ಅವರಿಗಿಂತ ಒಂದು ಹೆಜ್ಜೆ ಮುಂದೆ ಇರುವ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಸಬಲರಾಗಿರುವ ಹೆಣ್ಣುಮಕ್ಕಳು ತಮ್ಮ ತಂದೆ ತಾಯಿಗಳ ವೃದ್ಧಾಪ್ಯದ ಸಮಸ್ತ ಹೊಣೆಗಾರಿಕೆಯನ್ನು ಸಹ ನೋಡಿಕೊಳ್ಳುತ್ತಿದ್ದಾರೆ.

ಎಷ್ಟೋ ಜನ ತಂದೆ ತಾಯಿಗಳನ್ನು ತಮ್ಮ ಮದುವೆ ನಂತರವೂ ಪೊರೆಯುತ್ತಿರುವುದು ಹೆಣ್ಣುಮಕ್ಕಳೇ. ಇಳಿವಯಸ್ಸಿನ ಅನಾರೋಗ್ಯ, ಆರ್ಥಿಕ ಅವಲಂಬನೆ ಎಲ್ಲದಕ್ಕೂ ಹೆಣ್ಣುಮಕ್ಕಳು ಹೆಗಲಾಗಿ ನಿಲ್ಲುತ್ತಿದ್ದಾರೆ. ಹೀಗಿದ್ದಾಗ ಹೆಣ್ಣುಮಕ್ಕಳಿಗೆ ಅವರ ತಂದೆ ತಾಯಿಯರ ಕಾರ್ಯ ಮಾಡುವ ಅವಕಾಶ ಸಿಗಲೇಬೇಕಲ್ಲವೇ?

—ಆಶಾಬಾಯಿ ಆರ್., ಬೆಂಗಳೂರು